ತಾರೀಖು 18ನೆ ಡಿಸೆಂಬರ್ 1906.

ನಂ. ಆರ್. 6108 — ಫಾ. 44-06—4, ಮೈಸೂರು ಸರ್ವಿಸ್ ರೆಗ್ಯುಲೇಷನ್ಸುಗಳ 177ನೆ ಪ್ರಕರಣದ ಮೇರೆಗೆ ಮೈಸೂರು ಡಿಸ್ಟ್ರಿಕ್ಟಿನ ಜಂಗಲಿ ಸಬ್ ಅಸಿಸ್ಟೆಂಟ್ ಕಂಸರ್ವೇಟರಾದ ವಿ॥ ಜಿ. ಕೃಷ್ಣಮೂರ್ತಿ ನಾಯಡು ಯವರಿಗೆ 1906ನೆ ಇಸವಿಯ ಡಿಸೆಂಬರ್ 8ನೆ ತಾರೀಖಿನಿಂದ 8 ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 19ನೆ ಡಿಸೆಂಬರ್ 1906.

ನಂ. ಕೆ. 6145 ಫಾ. 7-05-9, 1900ನೆ ಇಸವಿಯ 11ನೆ ನಂಬರ್ ಮೈಸೂರು ಜಂಗಲಿ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ತೋರಿಸಿದ ಮೇರೆಗಳುಳ್ಳ ಪ್ರದೇಶವು, ಸದರಿ ಇಸ್ತಿಹಾರ್ನಾಮೆಯ ಕೆಳಗೆ ವಿವರಿಸಿರುವ ಹಕ್ಕುಗಳ ಜೆಲಾವಣಿಗೆ ಒಳಪಟ್ಟು, 1907ನೆ ಇಸವಿಯ ಜನವರಿ ಗುರ್ರೇ ಲಾಗಾಯಿತು "ಸಂಸ್ಥಾನ ಜಂಗಲಿ" ಎಂದು ಎಣಿಸಲ್ಪಡುವುದೆಂತ ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ	ತಾತ್ಕಾಲಿಕ ಹೆಸರು.	ಚತುರ್ಗಡಿ.
ಬೆಂಗಳೂರು.	ಚನ್ನಪಟ್ಟಣ.	193 ಚದರ ಮೈಲಿ.	ಕುರಣಗೆರೆ.	ಉತ್ತರಕ್ಕೆ :— ಮರ್ಜನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 8 ಸರಪಣಿಗಳ ದೂರದಲ್ಲಿ ಬಂದು ಸ್ಥಳದಿಂದ ಎಲ್ಲೆಯ ರೇಖೆಯು ಹೊರಟು ಈಶಾನ್ಯಕ್ಕೆ ಆ ಸರ್ವೆ ನಂಬರಿನ ಉತ್ತರ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗೂ, ಅಲ್ಲಿಂದ ಬಿಲಕೆರೆ ಗ್ರಾಮದ ಸರ್ವೆ 44ನೆ ನಂಬರಿನ ದಕ್ಷಿಣ ಭಾಗದಲ್ಲಿ ಅದರ ಆಗ್ನೇಯ ಮೂಲೆಗೂ ಹೋಗುತ್ತದೆ. ಪೂರ್ವಕ್ಕೆ :— ಅಲ್ಲಿಂದ ಆಗ್ನೇಯಕ್ಕೆ ಗೋವಿಂದನಹಳ್ಳಿ ಸರ್ವೆ 71ನೆ ನಂಬರಿನ ಪಶ್ಚಿಮ ಭಾಗದಲ್ಲಿ ಕುರಣಗೆರೆ ಗ್ರಾಮದ ಸರ್ವೆ 148ನೆ ನಂಬರಿನ ವಾಯವ್ಯ ಮೂಲೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಅದೆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿ ಕುರಣಗೆರೆ, ಚಕ್ಕೂರು, ಮತ್ತು ಕುಕ್ಕೂರು ಗ್ರಾಮಗಳ ಮುಕ್ಕುಪ್ಪೆ ಬಾಂದುಗಳಿಗೆ ಹೋಗುತ್ತದೆ.

ದಕ್ಷಿಣಕ್ಕೆ :—ಅಲ್ಲಿಂದ ನೈರುತ್ಯಕ್ಕೂ, ಪಶ್ಚಿಮಕ್ಕೂ ಕುಕ್ಕೂರು ಗ್ರಾಮದ ಸರ್ವೆ 1ನೆ ನಂಬರಿನ ಉತ್ತರ ಮೇರೆಯಲ್ಲಿ ಅದರ ವಾಯವ್ಯ ಮೂಲೆಗೆ ಹೋಗಿ, ಅಲ್ಲಿಂದ ವಾಯವ್ಯಕ್ಕೆ ಸರ್ವೆ 11ನೆ ನಂಬರಿನ ಪೂರ್ವಮೇರೆಯಲ್ಲಿ ಅದರ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಸರ್ವೆ 101ನೆ ನಂಬರಿನ ಪೂರ್ವಮೇರೆಯಲ್ಲಿ ಸುಮಾರು 3 ಸರಪಣಿಗಳ ದೂರ ಹೋಗಿ ಅಲ್ಲಿಂದ ಪಶ್ಚಿಮಕ್ಕೆ ಅದೇ ಮೇರೆಯಲ್ಲಿ ಸುಮಾರು 10 ಸರಪಣಿಗಳ ದೂರ ಹೋಗಿ, ಅಲ್ಲಿಂದ ನೈರುತ್ಯಕ್ಕೆ ಅದೇ ಮೇರೆಯಲ್ಲಿ ಸುಮಾರು 10 ಸರಪಣಿಗಳ ದೂರ ಹೋಗಿ, ಅಲ್ಲಿಂದ ವಾಯವ್ಯಕ್ಕೆ ಅದೇ ಮೇರೆಯಲ್ಲಿ ಸುಮಾರು 20 ಸರಪಣಿಗಳ ದೂರ ಹೋಗುತ್ತದೆ.

ಪಶ್ಚಿಮಕ್ಕೆ :—ಅಲ್ಲಿಂದ ಕುಕ್ಕೂರು ಗ್ರಾಮದ ಸರ್ವೆ 101ನೆ ನಂಬರಿನ ಪೂರ್ವ ಭಾಗದಲ್ಲಿ ಅದರ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಮರ್ಜನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವ ಮೇರೆಯಲ್ಲಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

A ಷರಾಗಳು—

ಈ ಕೆಳಗೆ ನಮೂದಿಸುವ ಸಾರ್ವಜನಿಕವಾದ ಹಕ್ಕುಗಳನ್ನು ಜನಗಳೂ ಮತ್ತು ದನಗಳೂ ವರ್ಷವಲ್ಲಾ ಉಪಯೋಗಿಸಿ ಕೊಳ್ಳಬಹುದೆಂದು ಒಪ್ಪಿಕೊಂಡಿದೆ :—

1. (i) ಕುರಣಗೆರೆಯಿಂದ ಮರ್ಜನಹಳ್ಳಿಗೆ ಹೋಗುವ ದನಗಳ ದಾರಿ, 12 ಅಡಿಗಳ ಅಗಲ; ಇದು ಕುರಣಗೆರೆ ಗ್ರಾಮದ ಸರ್ವೆ 148ನೆ ನಂಬರಿನ ಪಶ್ಚಿಮ ಪಾರ್ಶ್ವದ ಸುಮಾರು ಮಧ್ಯಭಾಗದಲ್ಲಿ ರಿಸರ್ವ್ ಜಂಗಲಿಯನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಸುಮಾರು 50 ಸರಪಣಿಗಳ ದೂರ ಹೋಗಿ, ಮರ್ಜನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವಭಾಗದಲ್ಲಿ ಅದರ ಆಗ್ನೇಯ ಮೂಲೆಯಿಂದ ಉತ್ತರಕ್ಕೆ ಸುಮಾರು 30 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(ii) ಕುರಣಗೆರೆಯಿಂದ ಕುಕ್ಕೂರಿಗೆ ಹೋಗುವ ಕಾಲುದಾರಿ, 4 ಅಡಿಗಳ ಅಗಲ. ಇದು (i)ನೆ ದಾರಿಯು ಜಂಗಲಿಯನ್ನು ಪ್ರವೇಶಿಸುವ ಸ್ಥಳದಿಂದ 2 ಸರಪಣಿಗಳ ದೂರದಲ್ಲಿ ರಿಸರ್ವ್ ಜಂಗಲಿಯನ್ನು ಪ್ರವೇಶಿಸಿ ಸುಮಾರು 47 ಸರಪಣಿಗಳದೂರ ದಕ್ಷಿಣಕ್ಕೆ ಹೋಗಿ, ಕುಕ್ಕೂರು ಗ್ರಾಮದ ಸರ್ವೆ 101ನೆ ನಂಬರಿನ ಪೂರ್ವ ಮೇರೆಯಲ್ಲಿ (ಸರ್ವೆ 11ನೆ ನಂಬರಿನ ಈಶಾನ್ಯ ಮೂಲೆಗೆ ಸರಿಯಾದ) ಆ ನಂಬರಿನ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 8 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

B. ಈ ತಾಕಿನಲ್ಲಿ ಈ ಕೆಳಗೆ ನಮೂದಿಸುವ ಹಕ್ಕುಗಳನ್ನು ಅಂಗೀಕರಿಸಿ ಇದೆ :—

ಹೆಸರು.	ಸ್ಥಳ.	ಪ್ರವೇಶ.
ನರಸಿಂಹಸ್ವಾಮಿಯ ದೇವಸ್ಥಾನ.	ಗುಡ್ಡದಮೇಲಿನ ಸರ್ವೆ 1ನೆ ನಂಬರಿನಲ್ಲಿ.	(iii) ಪರ್ವವೆಲ್ಲಾ ಜನಗಳ ಮತ್ತು ದನಗಳ ಸಂಚಾರಕ್ಕೆ ಬಿಡಲ್ಪಟ್ಟ ನಾಲ್ಕು ಅಡಿಗಳ ಅಗಲವಿರುವ ಒಂದು ಕಾಲು ದಾರಿಯಿಂದ ಈ ದಾರಿಯು ಬಿಲಕೆರೆ ಗ್ರಾಮದ ಸರ್ವೆ 44ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಜಂಗಲಿಯನ್ನು ಪ್ರವೇಶಿಸಿ ಸುಮಾರು 25 ಸರಪಣಿಗಳ ದೂರ ದಕ್ಷಿಣಕ್ಕೆ ಹೋಗಿ ದೇವಸ್ಥಾನಕ್ಕೆ ಸೇರುತ್ತದೆ.

II. ಈ ಕೆಳಗೆ ನಮೂದಿಸಲ್ಪಟ್ಟವುಗಳು ಆವರಣಗಳು ಎಂದು ಭಾವಿಸಲ್ಪಟ್ಟಿವೆ :—

(i) ನರಸಿಂಹಸ್ವಾಮಿಯ ದೇವಸ್ಥಾನ ಮತ್ತು ಅದರ ಮಂಟಪ, ಮತ್ತು ಅದರ ಸುತ್ತಲೂ ಅರ್ಧ ಎಕರೆ ವಿಸ್ತೀರ್ಣವುಳ್ಳ ಇಳಿದುಕೊಳ್ಳುವ ಸ್ಥಳವೂ ಸೇರಿ.

(ii) ಹನುಮಂತರಾಯನ ದೇವಸ್ಥಾನ, ಮತ್ತು ಅದರ ಸುತ್ತಲೂ ಅರ್ಧ ಎಕರೆ ವಿಸ್ತೀರ್ಣದ ಇಳಿದುಕೊಳ್ಳುವ ಸ್ಥಳವೂ ಸೇರಿ.

(iii) ಮರ್ಚನಹಳ್ಳಿ ಗ್ರಾಮದ ಸರ್ವೆ 83 ಮತ್ತು 84ನೆ ನಂಬರು ಜಮೀನುಗಳು. ಇವುಗಳಿಗೆ ಪ್ರವೇಶವು I (i)ನೆ ನಂಬರಿನ ದಾರಿ ಗುರ್ತಿನಲ್ಲಿ ತೋರಿಸಿ ಇದೆ.

III. ಈ ಕೆಳಗೆ ನಮೂದಿಸುವ ರಿಯಾಯಿತಿಗಳು ಅಂಗೀಕರಿಸಲ್ಪಟ್ಟಿವೆ :—

(i) ತರುವಾತಿ ವಿಂಗಡಿಸದೆ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಒಣಗಿ ಬಿದ್ದುಹೋಗಿ ಉಪಯೋಗಕ್ಕೆ ಬಾರದೆ ಇರುವ ಮರಗಳನ್ನು ಕಟ್ಟಿಗೆಗೋಸ್ಕರ ತಿಂಗಳು ಬಂಚಕ್ಕೆ ಬಂದು ಕುಟುಂಬಕ್ಕೆ 5 ತಲೆಹೊರೆಯಂತೆ ಜೂನ್ ತಿಂಗಳಿಂದ ಸೆಪ್ಟಂಬರ್ ತಿಂಗಳು ವರೆಗೆ ಸಂಸ್ಥಾನ ಜಂಗಲಿಯಲ್ಲಿ ಜಂಗಲಿ ಅಧಿಕಾರಿಗಳು ತೋರಿಸುವ ಪ್ರದೇಶಗಳಿಂದ ಮುಫತ್ತಾಗಿ ತೆಗದುಕೊಂಡು ಹೋಗುವುದು.

(ii) ಕೇಕದಾರನಿಂದ ಸರ್ಟಿಫೈ ಮಾಡಲ್ಪಟ್ಟ ಮೇರೆಗೆ ಪ್ರತಿ ವರ್ಷವೂ ಮುಫತ್ತಾಗಿ ಮನೆಯ ಅಂಕಣ ಬಂದಕ್ಕೆ 5 ತಲೆಹೊರೆಯು ಮೇರೆಗೆ ಮನೆ ಹೊದಿಸುವ ಹುಲ್ಲು.

(iii) ದೇವಸ್ಥಾನದಲ್ಲಿ ಅಡಿಗೆ ಮಾಡುವುದಕ್ಕೋಸ್ಕರ, ತಾಲ್ಲೂಕು ಅಮಲ್ದಾರರು ಸರ್ಟಿಫೈ ಮಾಡುವಷ್ಟು (1ನೆ ನಂಬರ್ ರಿಯಾಯಿತಿಯಲ್ಲಿ ತೋರಿಸಿದ ಜಾತಿಯ ಮರದ) ಸಾದೆಯನ್ನು ಶ್ರಾವಣ ಮಾಸದಲ್ಲಿ ಭಕ್ತಾದಿಗಳಿಗೆ ಮುಫತ್ತಾಗಿ ಕೊಡಬೇಕು.

(iv) ಕುರಿ ಮತ್ತು ಮೇಕೆಗಳು ಹೊರತು ಬಾಕಿ ದನಗಳನ್ನು ಮಾಮೂಲು ದರದಲ್ಲಿ ಅರ್ಧ ಚಾರ್ಜ್ ಕೊಟ್ಟು ಮೇಯಿಸುವುದು. ಇದು ಈ ಕೆಳಗೆ ಹೇಳುವ ಗ್ರಾಮಗಳ ದನಗಳಿಗೆ ವರ್ಷವೆಲ್ಲಾ ಲಗಾವಾಗುತ್ತದೆ :—

		ಕುರಿ ಮೇಕೆ ವಿನಾ ಬಾಕಿ ದನಗಳು.
1.	ಬಿಲಕೆರೆ	229
2.	ಗೋವಿಂದಹಳ್ಳಿ	64
3.	ಕುರಣಗೆರೆ	220
4.	ಕುಕ್ಕೂರು	173

(i) ಮತ್ತು (ii)ನೆ ರಿಯಾಯಿತಿಗಳು ಬಿಲಕೆರೆ, ಗೋವಿಂದಹಳ್ಳಿ, ಕುರಣಗೆರೆ, ಕುಕ್ಕೂರು ಮತ್ತು ಮರ್ಚನಹಳ್ಳಿ ಗ್ರಾಮಗಳ ರೈತರಿಗೆ ಲಗಾವಾಗುತ್ತದೆ.

ತಾರೀಖು 19ನೆ ಡಿಸೆಂಬರ್ 1906.

ನಂ. 6156 ಫಾ. 116--06—3, 1900ನೆಯ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರ್‌ನಾಮೆಗೆ ಲಗತ್ತಾಗಿರುವ ಷಡ್ಯೂಲಿನಲ್ಲಿ ನಮೂದಿರುವ ಚಕ್ಕುಬಂದಿಯುಳ್ಳ ವಿಸ್ತೀರ್ಣವು 1907ನೆಯ ಇಸವಿಯ ಜನವರಿ ಗುರ್ತಿ ಲಾಗಾಯಿತು ಸ್ಟೇಟ್ ಫಾರೆಸ್ಟ್ ಯಾ ಸಂಸ್ಥಾನ ಜಂಗಲಿಯಾಗಿ ಏರ್ಪಡಿಸಲ್ಪಡುವುದೆಂದು ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ :—

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿಯ ಹೆಸರು	ಸರ್ವೆ ನಂಬರುಗಳು	ಚಕ್ಕುಬಂದಿ
ತುಮಕೂರು	ಚಿಕ್ಕನಾಯಕನಹಳ್ಳಿ	ಕಾದರವಳ್ಳಿ ಜಂಗಲಿನ ಬಡಾನಹಳ್ಳಿ	ಸರ್ವೆ 1389, ಗುಂಟೆ 9	ಉತ್ತರಕ್ಕೆ :—ಚಿಕ್ಕದುರ್ಗ ಡಿಸ್ಟ್ರಿಕ್ಟಿನ ತಿರುಮನಾಲ್, ಮತ್ತು ತುಮಕೂರು ಡಿಸ್ಟ್ರಿಕ್ಟಿನ ವೇಲನಹಳ್ಳಿ ಮತ್ತು ಕೆಂಕೆರೆ ಗ್ರಾಮಗಳ ಮುಕ್ಕುಪ್ಪೆ ಎಲ್ಲೆಯ ಬಾಂದುಗಳಿಂದ ಹೊರಟು, ಎಲ್ಲೆಯ ರೇಖೆಯು ಪೂರ್ವಕ್ಕೆ ಸದರಿ ತಿರುಮನಾಲ್ ಗ್ರಾಮದ ಎಲ್ಲೆಯಲ್ಲಿ ವೇಲನಹಳ್ಳಿ ಗ್ರಾಮದ ಸರ್ವೆ 22ನೆ ನಂಬರಿನ ವಾಯವ್ಯ ಮೂಲೆಯವರೆಗೆ ಹೋಗುತ್ತದೆ. ಪೂರ್ವಕ್ಕೆ :—ಅಲ್ಲಿಂದ ವೇಲನಹಳ್ಳಿ ಗ್ರಾಮದ ಸರ್ವೆ 22 ಮತ್ತು 21ನೆ ನಂಬರುಗಳ ಮತ್ತು ಗುರುವಾಪುರದ ಗ್ರಾಮದ ಸರ್ವೆ 14, 15, 16, 10, 11, 12ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಸೊಟ್ಟುಸೊಟ್ಟಾಗಿ ದಕ್ಷಿಣ, ಆಗ್ನೇಯ ಮತ್ತು ನೈಋತ್ಯ ದಿಕ್ಕುಗಳಿಗೆ ಕೊನೆಯಲ್ಲಿ ಹೇಳಿದ ಸರ್ವೆ ನಂಬರಿನ ವಾಯವ್ಯಮೂಲೆಯ ವರೆಗೂ ಹೋಗುತ್ತದೆ.